ಎನಿಸಬಹುದು, ಓದುವಾಗ ಹಾಗೂ ರಾತ್ರಿ ವಾಹನ ಚಾಲನೆ ಮಾಡುವಾಗ ಕಷ್ಟವಾಗಬಹುದು. ಇಂತಹ ತೊಂದರೆಗಳನ್ನು ಕಾಂಟೋರಾ ವಿಷನ್‌ನಿಂದ ಪರಿಹರಿಸಲು ಸಾಧ್ಯ.

'–1ರಿಂದ ಹಿಡಿದು –10ರವರೆಗಿನ ದೃಷ್ಟಿದೋಷವನ್ನು ಈ ಟೋಪೋಗ್ರಫಿ ನಿರ್ದೇಶಿತ ಕಾಂಟೋರಾ ವಿಷನ್ ಲಾಸಿಕ್ ಚಿಕಿತ್ಸೆಯು ಸರಿಪಡಿಸುತ್ತದೆ' ಎನ್ನುವ ಡಾ.ಶೆಟ್ಟಿ, '8–10 ನಿಮಿಷಗಳಲ್ಲೇ ಈ ಚಿಕಿತ್ಸೆ ಮುಗಿದುಹೋಗುತ್ತದೆ. ಅಂದರೆ ಡೇ ಕೇರ್ ಸೌಲಭ್ಯದಲ್ಲೇ ಚಿಕಿತ್ಸೆ ಪಡೆದು ವ್ಯಕ್ತಿ ಮನೆಗೆ ತೆರಳಬಹುದು' ಎನ್ನುತ್ತಾರೆ.

ಸ್ಥಳೀಯವಾಗಿ ಅನಸ್ತೇಶಿಯ ಬಳಸಲಾಗುವುದು. ಚಿಕಿತ್ಸೆ ನಡೆಯುವಾಗ ಯಾವುದೆ ನೋವಿನ ಅನುಭವವೂ ಆಗಲಾರದು. ಬ್ಯಾಂಡೇಜ್ ಅಥವಾ ಹೊಲಿಗೆ ಹಾಕಬೇಕಾದ ಪ್ರಮೇಯವಿಲ್ಲ. ಆಸ್ಪತ್ರೆಯಿಂದ 24 ಗಂಟೆಗಳೊಳಗೆ ಬಿಡುಗಡೆ ಮಾಡಲಾಗುವುದು. 4–5 ದಿನಗಳ ಕಾಲ ವಿಶ್ರಾಂತಿ ಪಡೆಯ ಬೇಕಾಗುತ್ತದೆ. ಅಂದರೆ ಕಣ್ಣಿನ ಮೇಲೆ ಯಾವುದೇ ಒತ್ತಡ ಬೀಳದಂತೆ ನೋಡಿ ಕೊಳ್ಳಬೇಕು. ಶಸ್ತ್ರಚಿಕಿತ್ಸೆ ನಂತರ ಒಂದು ವಾರ ತಲೆಸ್ನಾನ ಮಾಡಬಾರದು. ಕಣ್ಣಿಗೆ ನೀರು ಸೋಕಿಸಬಾರದು ಎಂದು ವೈದ್ಯರು ಎಚ್ಚರಿಕೆ ನೀಡುತ್ತಾರೆ. ಚಿಕಿತ್ಸೆ ನೀಡಿದ ಮರುದಿನ ಹಾಗೂ 5–6 ವಾರಗಳ ನಂತರ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಬೇಕು.

## ಎಂಥವರಿಗೆ ಈ ಚಿಕಿತ್ಸೆ?

ಈ ಸುಧಾರಿತ ಚಿಕಿತ್ಸೆ ಪಡೆಯುವವರು 21 ವರ್ಷ ವಯಸ್ಸು ಮೇಲ್ಪಟ್ಟ ವರಿರಬೇಕು. ಯಾಕೆಂದರೆ ಈ ವಯಸ್ಸಿನವರೆಗೂ ಕಣ್ಣಿನ ಬೆಳವಣಿಗೆ ಇರುತ್ತದೆ ಎನ್ನುತ್ತಾರೆ ವೈದ್ಯರು. ದೋಷದ ಪ್ರಮಾಣ –1ಕ್ಕಿಂತ ಕಡಿಮೆ ಇರುವವರಿಗೆ ಸಾಮಾನ್ಯವಾಗಿ ಮಾಡುವುದಿಲ್ಲ. ಇದಕ್ಕಿಂತ ಹೆಚ್ಚು ಅಂದರೆ –10ರವರೆಗೂ ಚಿಕಿತ್ಸೆ ನೀಡಲಾಗುವುದು. ದೂರದೃಷ್ಟಿ ಅಂದರೆ +5ರವರೆಗೆ ದೋಷ ಇರುವವರು ಕೂಡಾ ಮಾಡಿಸಿಕೊಳ್ಳಬಹುದು. ಸಮೀಪದೃಷ್ಟಿ ದೋಷ ಉಳ್ಳವರಿಗೆ ಕಾರ್ನಿಯಾವನ್ನು ಚಪ್ಪಟೆ ಮಾಡಲಾಗುವುದು. ದೂರದೃಷ್ಟಿ ದೋಷ ಹೊಂದಿರುವವರಿಗೆ ಕಾರ್ನಿಯಾವನ್ನು ಹೆಚ್ಚು ಇಳಿಜಾರಾಗಿರುವಂತೆ ಬಾಗಿಸಲಾಗುತ್ತದೆ.

'ಈ ಚಿಕಿತ್ಸೆಯಿಂದ ಶೇ. 95ರಷ್ಟು ಮಂದಿ ತಮ್ಮ ದೃಷ್ಟಿ ದೋಷವನ್ನು ಸರಿಪಡಿಸಿಕೊಂಡು ಕನ್ನಡಕದ ಸಹಾಯವಿಲ್ಲದೇ ನೋಡಲು, ಓದಲು ಸಾಧ್ಯ. ಈ ಚಿಕಿತ್ಸೆ ಮಾಡಿಸಿಕೊಂಡವರಲ್ಲಿ ಶೇ 4–5ರಷ್ಟು ಮಂದಿಗೆ ದೋಷ ಮರಳಿ ಬರುವ ಸಾಧ್ಯತೆ ಇದ್ದು, ಇನ್ನೊಮ್ಮೆ ಚಿಕಿತ್ಸೆ ನೀಡಿ ಸರಿಪಡಿಸಬಹುದು' ಎನ್ನುತ್ತಾರೆ ಡಾ.ಶೆಟ್ಟಿ.

ಎಲ್ಲರೂ ಈ ಚಿಕಿತ್ಸೆ ಪಡೆಯಬಹುದು ಎಂಬ ನಂಬಿಕೆ ಇದೆ. ಆದರೆ ದೋಷವುಳ್ಳವರಲ್ಲಿ ಶೇ. 60ರಷ್ಟು ಮಂದಿ ಮಾತ್ರ ಈ ಚಿಕಿತ್ಸೆ ಪಡೆಯ ಬಹುದು. ಈ ಆಧುನಿಕ ಹಾಗೂ ಸುಧಾರಿತ ಚಿಕಿತ್ಸಾ ಸೌಲಭ್ಯವನ್ನು ಕರ್ನಾಟಕದಲ್ಲಿ ಆರಂಭಿಸಿದ ಮೊಟ್ಟ ಮೊದಲ ಆಸ್ಪತ್ರೆ ನಾರಾಯಣ ನೇತ್ರಾಲಯ. ಆರಂಭವಾದ ಕಳೆದ 8 ತಿಂಗಳಲ್ಲೇ ಒಂದು ಸಾವಿರಕ್ಕೂ ಅಧಿಕ ಮಂದಿಗೆ ಈ ಚಿಕಿತ್ಸೆ ನೀಡಲಾಗಿದೆ.

'ದುಬೈ, ಅಬುದಾಬಿ, ಆಫ್ರಿಕಾ, ಕ್ಯಾಮೆರೂನ್ ಮೊದಲಾದ ದೇಶ ಗಳಿಂದಲೂ ಬಹಳಷ್ಟು ಮಂದಿ ಆಗಮಿಸಿ ಈ ಚಿಕಿತ್ಸೆ ಪಡೆದುಕೊಂಡು ಕನ್ನಡಕ ಧರಿಸುವ ಹೊರೆಯಿಂದ ಪಾರಾಗಿದ್ದಾರೆ' ಎನ್ನುವ ವೈದ್ಯರು, ಗರ್ಭಿಣಿಯರಿಗೆ, ತೆಳು ಕಾರ್ನಿಯಾ ಹೊಂದಿರುವವರಿಗೆ, ದೃಷ್ಟದೋಷ –15, –16ರಷ್ಟು ಇರುವವರಿಗೆ, ರುಮಟೈಡ್ ಸಂದಿವಾತ, ಕೊಲಾಜೆನ್ ವಾಸ್ಕ್ಯುಲರ್ ಕಾಯಿಲೆ ಇರುವವರಿಗೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲ' ಎನ್ನುತ್ತಾರೆ.

'ಚಿಕಿತ್ಸೆಗೆ 45– 85 ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಗ್ರಾಮೀಣ ಭಾಗದವರಿಗೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ವಾಗಿ ಚಿಕಿತ್ಸೆ ನೀಡಿದ್ದೇವೆ. ಸಾಮಾನ್ಯವಾಗಿ ಯುವತಿಯರು ದೃಷ್ಟಿ ದೋಷ ದಿಂದಾಗಿ ವಿವಾಹವಾಗಲು ಸಮಸ್ಯೆಯಾದವರು ಈ ಚಿಕಿತ್ಸೆ ಮಾಡಿಸಿಕೊಳ್ಳಲು ಮುಂದೆ ಬರುತ್ತಿದ್ದಾರೆ' ಎನ್ನುತ್ತಾರೆ ಡಾ.ಶೆಟ್ಟಿ.

ಹೆಚ್ಚಿನ ದೃಷ್ಟಿ ದೋಷವುಳ್ಳವರು, ಕನ್ನಡಕ ಧರಿಸಲು ಕಿರಿಕಿರಿಯಾದರೆ ಚಿಂತೆ ಬೇಡ. ಈ ಸರಳವಾದ ಚಿಕಿತ್ಸೆಯಿಂದ ದೋಷ ಸರಿಪಡಿಸಿಕೊಂಡು ದೃಷ್ಟಿಯನ್ನು ಇನ್ನೂ ಉತ್ತಮಪಡಿಸಿಕೊಳ್ಳಬಹುದು.



